**All India Radio: Bangalore**
**National Bulletin In Kannada**
**24.03.2025 07.35 a.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><><><>**

ಮುಖ್ಯಾಂಶಗಳು

- ಛತ್ತೀಸ್‌ಗಢ ಮತ್ತು ಒಡಿಶಾಗೆ ಇಂದು ಭೇಟಿ ನೀಡಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ; ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿ
- ಎಂಎಸ್‌ಎಂಇಗಳ ವರ್ಗೀಕರಣಕ್ಕೆ ವಹಿವಟು ಹೂಡಿಕೆ ಮಾನದಂಡಗಳಲ್ಲಿ ಪರಿಷ್ಕರಣೆ ಪ್ರಕಟಿಸಿದ ಸರ್ಕಾರ
- ಇಂದು ವಿಶ್ವ ಕ್ಷಯರೋಗ ದಿನ ಆಚರಣೆ ; ಟಿಬಿ ಮುಕ್ತ ಸಮಾಜ ನಿರ್ಮಾಣ ಕುರಿತು ಜಾಗೃತಿ
- ಕಬ್ಬಡಿ ವಿಶ್ವಕಪ್ - ೨೦೨೫ ; ಪ್ರಶಸ್ತಿ ಮುಡಿಗೇರಿಸಿಕೊಂಡ ಭಾರತದ ಪುರುಷರ ಹಾಗೂ ಮಹಿಳಾ ತಂಡಗಳು
- ಐಪಿಎಲ್ ಟಿ-೨೦ ಕ್ರಿಕೆಟ್ ; ಮುಂಬೈ ಇಂಡಿಯನ್ಸ್ ವಿರುದ್ಧ ಚೆನ್ನೈ ಸೂಪರ್ ಕಿಂಗ್ಸ್‌ಗೆ ೪ ವಿಕೆಟ್‌ಗಳ ಜಯ

<><><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ಛತ್ತೀಸ್‌ಗಢ ಮತ್ತು ಒಡಿಶಾಗೆ ಭೇಟಿ ನೀಡಲಿದ್ದಾರೆ. ಭೇಟಿಯ ಭಾಗವಾಗಿ ರಾಷ್ಟ್ರಪತಿ, ರಾಯ್‌ಪುರದಲ್ಲಿ ಛತ್ತೀಸ್‌ಗಢ ವಿಧಾನಸಭೆಯ ರಜತ ಮಹೋತ್ಸವದಲ್ಲಿ ಭಾಗವಹಿಸಲಿದ್ದಾರೆ. ಬಳಿಕ ಅವರು ಒಡಿಶಾದ ನಯಾಗಢದಲ್ಲಿ ನಡೆಯಲಿರುವ ಭಾರತೀಯ ಬಿಸ್ವಬಸು ಶಬರ್ ಸಮಾಜದ ಸಂಸ್ಥಾಪನಾ ದಿನಾಚರಣೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

<><><><>

ಏಪ್ರಿಲ್ ೧ ರಿಂದ ಜಾರಿಗೆ ಬರುವಂತೆ ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಕೈಗಾರಿಕೆ- ಎಂಎಸ್‌ಎಂಇ ಗಳನ್ನು ವರ್ಗೀಕರಿಸಲು ವಹಿವಾಟು ಮತ್ತು ಹೂಡಿಕೆ ಮಾನದಂಡಗಳಿಗೆ ಸರ್ಕಾರ ಮಹತ್ವದ ಪರಿಷ್ಕರಣೆಗಳನ್ನು ಪ್ರಕಟಿಸಿದೆ.

ಈ ಕುರಿತು ಒಂದು ವರದಿ : ೫೧ ಸೆಕೆಂಡ್‌ಗಳು

೨.೫ ಕೋಟಿ ರೂಪಾಯಿಗಳವರೆಗೆ ಹೂಡಿಕೆ ಹೊಂದಿರುವ ಎಂಎಸ್‌ಎಂಇ ಉದ್ಯಮಗಳನ್ನು ಈಗ ಅತಿಸಣ್ಣ ಉದ್ಯಮಗಳಾಗಿ ವರ್ಗೀಕರಿಸಲಾಗುತ್ತದೆ. ಈ ಮೊದಲು ಇದರ ಮಿತಿ ೧ ಕೋಟಿ ರೂಪಾಯಿಯಾಗಿತ್ತು. ಇದರ ಜೊತೆಗೆ ಅತಿಸಣ್ಣ ಕೈಗಾರಿಕೆಗಳ ವಹಿವಾಟು ಮಿತಿಯನ್ನು ೫ ಕೋಟಿ ರೂಪಾಯಿಯಿಂದ ೧೦ ಕೋಟಿ ರೂಪಾಯಿಗಳಿಗೆ ಪರಿಷ್ಕರಿಸಲಾಗಿದೆ. ಈ ಹಿಂದೆ ೧೦ ಕೋಟಿ ರೂಪಾಯಿ ಹೂಡಿಕೆ ಹೊಂದಿದ್ದ ಉದ್ಯಮಗಳನ್ನು ಸಣ್ಣ ಉದ್ಯಮಗಳಾಗಿ ವರ್ಗೀಕರಿಸಲಾಗುತ್ತಿತ್ತು. ಆದರೀಗ ೨೫ ಕೋಟಿ ರೂಪಾಯಿಗಳವರೆಗೆ ಹೂಡಿಕೆ ಹೊಂದಿರುವ ಉದ್ಯಮಗಳೂ ಇದೇ ವರ್ಗಕ್ಕೆ ಸೇರಲಿವೆ. ಅಂತಹ ಉದ್ಯಮಗಳ ವಹಿವಾಟು ಮಿತಿಯನ್ನು ೫೦ ಕೋಟಿ ರೂಪಾಯಿಗಳಿಂದ ೧೦೦ ಕೋಟಿ ರೂಪಾಯಿಗಳಿಗೆ ದ್ವಿಗುಣಗೊಳಿಸಲಾಗಿದೆ. ಇನ್ನು ೫೦ ಕೋಟಿ ರೂಪಾಯಿ ಹೂಡಿಕೆ ಹೊಂದಿದ್ದ ಉದ್ಯಮಗಳನ್ನು ಮಧ್ಯಮ ಉದ್ಯಮಗಳಾಗಿ ವರ್ಗೀಕರಿಸಲಾಗುತ್ತಿತ್ತು. ಆದರೀಗ ೧೨೫ ಕೋಟಿ ರೂಪಾಯಿಗಳವರೆಗೆ ಹೂಡಿಕೆ ಹೊಂದಿರುವ ಉದ್ಯಮಗಳೂ ಮಧ್ಯಮ ಕೈಗಾರಕೆ ವರ್ಗಕ್ಕೆ ಸೇರ್ಪಡೆಗೊಳಿಸಲಾಗಿದೆ. ಹಾಗೆಯೇ, ಈ ವರ್ಗದ ಉದ್ಯಮಗಳ ವಹಿವಾಟು ಮಿತಿಯನ್ನು ೨೫೦ ಕೋಟಿ ರೂಪಾಯಿಯಿಂದ, ೫೦೦ ಕೋಟಿ ರೂಪಾಯಿಗೆ ಹೆಚ್ಚಿಸಲಾಗಿದೆ.

<><><><>

ದೇಶಾದ್ಯಂತ ಇಂದು ವಿಶ್ವ ಕ್ಷಯರೋಗ ದಿನ ಆಚರಣೆ ಮಾಡಲಾಗುತ್ತಿದೆ. ಕ್ಷಯರೋಗ ಕುರಿತು ಜಾಗೃತಿ ಮೂಡಿಸಲು, ಹಾಗೂ ಕ್ಷಯರೋಗ ಮುಕ್ತ ಸಮಾಜ ನಿರ್ಮಾಣ ಮಾಡಲು ಪ್ರತಿವರ್ಷ ಮಾರ್ಚ್ ೨೪ರಂದು ವಿಶ್ವಕ್ಷಯರೋಗ ದಿನವನ್ನು ಆಚರಿಸಲಾಗುತ್ತದೆ. ಡಾ. ರಾಬರ್ಟ್ ಕೋಚ್ ಅವರು ಟಿಬಿ ಬ್ಯಾಕ್ಟೀರಿಯಾವನ್ನು ಕಂಡುಹಿಡಿದ ವಾರ್ಷಿಕೋತ್ಸವದ ಸ್ಮರಣಾರ್ಥ ಈ ದಿನವನ್ನು ಆಚರಿಸಲಾಗುತ್ತದೆ.

ಈ ಕುರಿತು ಒಂದು ವರದಿ : ೬೦ ಸೆಕೆಂಡ್‌ಗಳು

'ಹೌದು! ನಾವು ಕ್ಷಯರೋಗವನ್ನು ಕೊನೆಗೊಳಿಸಬಹುದು: ಬದ್ಧರಾಗಿರಿ, ಹೂಡಿಕೆ ಮಾಡಿ ಮತ್ತು ಕಾರ್ಯಪ್ರವೃತ್ತರಾಗಿ.

ಎಂಬುದು ಈ ವರ್ಷದ ವಿಶ್ವಕ್ಷಯರೋಗ ದಿನದ ಧ್ಯೇಯವಾಕ್ಯವಾಗಿದೆ. ಕ್ಷಯರೋಗವನ್ನು ಕೊನೆಗೊಳಿಸಲು ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ ಪ್ರಯತ್ನಗಳನ್ನು ಪ್ರತಿಬಿಂಬಿಸಲು ಮತ್ತು ಬಲವಾದ ಬದ್ಧತೆಯನ್ನು ಪ್ರೋತ್ಸಾಹಿಸಲು ಈ ದಿನ ಒಂದು ಅವಕಾಶವಾಗಿದೆ.ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕ್ಷಯವನ್ನು ನಿರ್ಮೂಲನೆ ಮಾಡಲು ಕೇಂದ್ರ ಸರ್ಕಾರ ಹಲವಾರು ಉಪಕ್ರಮಗಳನ್ನು ತೆಗೆದುಕೊಂಡಿದೆ. ಜನರಲ್ಲಿ ಕ್ಷಯರೋಗ ಪ್ರಕರಣಗಳ ಪತ್ತೆಯನ್ನು ತೀವ್ರಗೊಳಿಸುವುದು, ಕ್ಷಯ ರೋಗಿಗಳಿಗೆ ಉಚಿತ ಔಷಧಗಳು ಮತ್ತು ರೋಗನಿರ್ಣಯ ವ್ಯವಸ್ಥೆಗಳನ್ನು ಒದಗಿಸುವುದು ಮತ್ತು ನಿ-ಕ್ಷಯ ಪೋಷಣ್ ಯೋಜನೆಯಡಿಯಲ್ಲಿ ರೋಗಿಗೆ ಪೌಷ್ಠಿಕಾಂಶದ ಬೆಂಬಲವಾಗಿ ತಿಂಗಳಿಗೆ ಒಂದು ಸಾವಿರ ರೂಪಾಯಿಗಳನ್ನು ನೀಡುವುದು ಸರ್ಕಾರ ಕೈಗೊಂಡಿರುವ ಕೆಲವು ಕ್ರಮಗಳಾಗಿವೆ.  ಕ್ಷಯ ಪ್ರಕರಣದ ಸಾವಿನ ಪ್ರಮಾಣ ತಗ್ಗಿಸಲು ಮತ್ತು ಹೊಸ ಪ್ರಕರಣಗಳನ್ನು ತಡೆಗಟ್ಟಲು ೩೩ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಗುರುತಿಸಲಾದ ಆದ್ಯತೆಯ ಜಿಲ್ಲೆಗಳಲ್ಲಿ ೧೦೦ ದಿನಗಳ ಕ್ಷಯರೋಗ ನಿರ್ಮೂಲನಾ ಅಭಿಯಾನವನ್ನು ನಡೆಸಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ೨೦೨೪ ರ ಜಾಗತಿಕ ಕ್ಷಯರೋಗ ವರದಿಯ ಪ್ರಕಾರ, ಭಾರತದಲ್ಲಿ ಕ್ಷಯರೋಗದ ಪ್ರಮಾಣ ಶೇಕಡಾ ೧೭.೭ ರಷ್ಟು ಇಳಿಮುಖವಾಗಿದೆ.

<><><><>

ತಮ್ಮ ಸರ್ಕಾರದ ಎಂಟು ವರ್ಷಗಳ ಅವಧಿಯಲ್ಲಿ ಎಲ್ಲಾ ಧರ್ಮಗಳು ಮತ್ತು ಸಮುದಾಯಗಳ ಹಬ್ಬಗಳು ಶಾಂತಿಯುತ ಮತ್ತು ಸಾಮರಸ್ಯದ ವಾತಾವರಣದಲ್ಲಿ ನಡೆದಿವೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಹೇಳಿದ್ದಾರೆ. ಮುಂದಿನ ಎರಡು ವಾರಗಳಲ್ಲಿ ಚೈತ್ರ ನವರಾತ್ರಿ, ರಾಮನವಮಿ, ಈದ್-ಉಲ್-ಫಿತರ್ ಮತ್ತು ಬೈಸಾಖಿಯಂತಹ ಪ್ರಮುಖ ಹಬ್ಬಗಳು ಆಚರಿಸಲಾಗಿತ್ತಿವೆ. ಹಬ್ಬದ ಋತುವಿಗೆ ಮುಂಚಿತವಾಗಿ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ಪರಿಶೀಲಿಸಲು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇದು ಸೂಕ್ಷ್ಮ ಸಮಯವಾಗಿದ್ದು, ಅರಾಜಕತೆಯನ್ನು ಹರಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕಾದ ಅಗತ್ಯವಿದೆ.

ಹಬ್ಬಗಳ ಸಮಯದಲ್ಲಿ, ಮೆರವಣಿಗೆಗಳನ್ನು ನಡೆಸಲಾಗುವುದು ಮತ್ತು ಅನೇಕ ಸ್ಥಳಗಳಲ್ಲಿ ಜಾತ್ರೆಗಳನ್ನು ನಡೆಸಲಾಗುವುದು. ಆದ್ದರಿಂದ, ನಿರಂತರವಾಗಿ ಜಾಗರೂಕರಾಗಿರಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಧಾರ್ಮಿಕ ಚಟುವಟಿಕೆಗಳಿಂದಾಗಿ ರಸ್ತೆಗಳು ಅಡಚಣೆಯಾಗದಂತೆ ನೋಡಿಕೊಳ್ಳಬೇಕು ಹಾಗೂ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸುವ ಮೂಲಕ ಹೆಚ್ಚುವರಿ ಪೊಲೀಸ್ ಪಡೆಗಳನ್ನು ನಿಯೋಜಿಸಬೇಕು. ರಾಮನವಮಿಯಂದು ಅಯೋಧ್ಯೆಗೆ ಮತ್ತು ಚೈತ್ರ ನವರಾತ್ರಿಯ ಸಂದರ್ಭದಲ್ಲಿ ಸಹರಾನ್‌ಪುರ ಮತ್ತು ಸೀತಾಪುರದ ವಿಂಧ್ಯವಾಸಿನಿ ಧಾಮ, ದೇವಿ ಪಟಣ್ ಧಾಮ ಮತ್ತು ಶಕುಂಭರಿ ಧಾಮಕ್ಕೆ ಹೆಚ್ಚಿನ ಸಂಖ್ಯೆಯ ಜನರು ಬರುತ್ತಾರೆ. ಹಬ್ಬಗಳ ಸಮಯದಲ್ಲಿ ಸರ್ಕಾರವು ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕು ಹಾಗೆಯೇ ಈದ್ ಸಂದರ್ಭದಲ್ಲಿ ಸ್ವಚ್ಛತೆ, ನೈರ್ಮಲ್ಯ ಮತ್ತು ಕುಡಿಯುವ ನೀರಿಗೆ ಸರಿಯಾದ ವ್ಯವಸ್ಥೆಗಳನ್ನು ಖಚಿತಪಡಿಸಿಕೊಳ್ಳುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

<><><>

ದೆಹಲಿ ವಿಧಾನಸಭೆಯ ಬಜೆಟ್ ಅಧಿವೇಶನ ಇಂದು ಆರಂಭವಾಗಲಿದೆ. ತಾತ್ಕಾಲಿಕ ವೇಳಾಪಟ್ಟಿಯಂತೆ ಈ ತಿಂಗಳ ೨೮ರವರೆಗೆ ಕಲಾಪ ನಿಗದಿಯಾಗಿದೆ. ಡಿಟಿಸಿ ಕಾರ್ಯನಿರ್ವಹಣೆ ಕುರಿತ ಸಿಎಜಿ ವರದಿಯನ್ನು ಇಂದು ಸದನದಲ್ಲಿ ಮಂಡಿಸಲಾಗುವುದು. ನಾಳೆ ಬಜೆಟ್ ಮಂಡನೆಯಾಗಲಿದೆ. ಬಜೆಟ್ ಹಾಗೂ ವಿವಿಧ ಇಲಾಖೆಗಳಿಗೆ ನಿಗದಿಯಾದ ಹಣದ ಬಟವಾಡೆ ಮತ್ತು ನೀತಿ ಉಪಕ್ರಮಗಳ ಬಗ್ಗೆ ೨೬ ರಿಂದ ಚರ್ಚೆ ನಡೆಯಲಿದೆ.

<><><>

ಕೆನಡಾದ ನೂತನ ಪ್ರಧಾನಿ ಮಾರ್ಕ್ ಕಾರ್ನಿ ಇದೇ ೨೮ ರಂದು ಕ್ಷಿಪ್ರ ಚುನಾವಣೆ ನಡೆಸಲು ಕರೆ ನೀಡಿದ್ದಾರೆ. ಪ್ರಸ್ತುತ ಅಧಿಕಾರದಲ್ಲಿರುವ ಲಿಬ್ರಲ್ ಪಕ್ಷಕ್ಕಿಂತ ಸದೃಢ ಜನ ದೇಶ ಹೊಂದಿರುವ ಸರ್ಕಾರ ಖಚಿತಪಡಿಸಿಕೊಳ್ಳಲು ಅವರು ಈ ನಿರ್ಧಾರ ಕೈಗೊಂಡಿರುವುದಾಗಿ ತಿಳಿಸಿದ್ದಾರೆ. ನೆರೆಯ ಅಮೆರಿಕದೊಂದಿಗಿನ ವ್ಯಾಪಾರ ಸಮರ ಮತ್ತು ಕೆನಡಾವನ್ನು ಅಮೆರಿಕದ ೫೧ನೇ ರಾಜ್ಯವನ್ನಾಗಿ ಮಾಡುವ ಅಧ್ಯಕ್ಷ ಟ್ರಂಪ್ ಅವರ ಬೆದರಿಕೆಯನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮ ಮಹತ್ವ ಪಡೆದಿದೆ.

<><><>

ಸೌದಿ ಅರೇಬಿಯಾದ ರಾಜಧಾನಿ ರಿಯಾದ್‌ನಲ್ಲಿ ಅಮೆರಿಕ ಹಾಗೂ ಉಕ್ರೇನ್ ನಿಯೋಗಗಳ ನಡುವಿನ ಮಾತುಕತೆಗಳು ಮುಕ್ತಾಯಗೊಂಡಿದ್ದು, ಉಕ್ರೇನ್ ರಕ್ಷಣಾ ಸಚಿವ ರುಸ್ತೇಮ್ ಉಮೇರೊವ್ ಹೇಳಿದ್ದಾರೆ. ಇಂಧನ ಸೇರಿದಂತೆ ಹಲವು ವಿಷಯಗಳ ಕೇಂದ್ರೀಕೃತ ಚರ್ಚೆಗಳು ಉತ್ಪಾದಕವಾಗಿದ್ದವು ಎಂದು ಅವರು ತಿಳಿಸಿದ್ದಾರೆ.

<><><>

ಇಂಗ್ಲೆಂಡ್‌ನಲ್ಲಿ ನಡೆದ ೨೦೨೫ ರ ಕಬ್ಬಡಿ ವಿಶ್ವಕಪ್‌ನಲ್ಲಿ ಪುರುಷರ ಹಾಗೂ ಮಹಿಳಾ ವಿಭಾಗದಲ್ಲಿ ಭಾರತದ ತಂಡಗಳು ಪ್ರಶಸ್ತಿ ಗೆದ್ದುಕೊಂಡಿದೆ. ವಾಲ್ವರ್ ಹ್ಯಾಂಪ್‌ಟನ್‌ನಲ್ಲಿ ನಿನ್ನೆ ನಡೆದ ಅಂತಿಮ ಪಂದ್ಯದಲ್ಲಿ ಪುರುಷರ ತಂಡ ಇಂಗ್ಲೆಂಡ್ ತಂಡವನ್ನು ೪೪-೪೧ ಅಂತರದಲ್ಲಿ ಮಣಿಸಿ ವಿಶ್ವಕಪ್ ಕಿರೀಟ ಮುಡಿಗೇರಿಸಿಕೊಂಡಿದೆ. ಇದಕ್ಕೂ ಮೊದಲು ನಡೆದ ಮಹಿಳಾ ವಿಭಾಗದ ಫೈನಲ್ ಪಂದ್ಯದಲ್ಲಿ ಭಾರತದ ವನಿತೆಯರ ತಂಡ ಇಂಗ್ಲೆಂಡ್ ತಂಡದ ವಿರುದ್ಧ ೫೬-೩೪ ಅಂಕಗಳ ಅಂತರದಲ್ಲಿ ಭರ್ಜರಿ ಗೆಲುವು ಸಾಧಿಸಿದೆ.

<><><>

ಚೆನ್ನೈನ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಇಂಡಿಯನ್ ಪ್ರಿಮಿಯರ್ ಲೀಗ್ ಐಪಿಎಲ್ ಟಿ-೨೦ ಕ್ರಿಕೆಟ್ ಟೂರ್ನಿಐ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಮುಂಬೈ ಇಂಡಿಯನ್ಸ್ ವಿರುದ್ಧ ೪ ವಿಕೆಟ್‌ಗಳ ಜಯ ದಾಖಲಿಸಿದೆ. ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಮುಂಬೈ ಇಂಡಿಯನ್ಸ್ ನಿಗದಿತ ೨೦ ಓವರ್‌ಗಳಲ್ಲಿ ೯ ವಿಕೆಟ್ ನಷ್ಟಕ್ಕೆ ೧೫೫ ರನ್ ಗಳಿಸಿತು. ಪ್ರತ್ಯುತ್ತರವಾಗಿ ಚೆನ್ನೈ ತಂಡ ೧೯.೧ ಓವರ್‌ಗಳಲ್ಲಿ ೬ ವಿಕೆಟ್ ನಷ್ಟಕ್ಕೆ ೧೫೮ ರನ್ ಗಳಿಸಿ ಗೆಲುವಿನ ನಗೆ ಬೀರಿತು.

<><><>

ನವದೆಹಲಿಯಲ್ಲಿ ನಿನ್ನೆ ನಡೆದ ಖೇಲೋ ಇಂಡಿಯಾ ಪ್ಯಾರಾ ಗೇಮ್ಸ್‌ನ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಪಂಜಾಬ್‌ನ ಜಸ್ಪ್ರೀತ್ ಕೌರ್ ರಾಷ್ಟ್ರೀಯ ದಾಖಲೆಯನ್ನು ಮುರಿದಿದ್ದಾರೆ. ೪೫ ಕೆ.ಜಿ. ವಿಭಾಗದಲ್ಲಿ ಚಿನ್ನ ಗೆಲ್ಲುವ ಮೂಲಕ ಅವರು, ತಮ್ಮದೇ ಹಿಂದಿನ ರಾಷ್ಟ್ರೀಯ ದಾಖಲೆಯನ್ನು ಉತ್ತಮಗೊಳಿಸಿದ್ದಾರೆ. ಇದೇ ಸ್ಪರ್ಧೆಐ ೫೪ ಕೆ.ಜಿ. ವಿಭಾಗದಲ್ಲಿ ೧೬೬ ಕೆ.ಜಿ.

ಭಾರ ಎತ್ತುವ ಮೂಲಕ ಮನೀಷ್ ಸ್ವರ್ಣ ಪದಕ ತಮ್ಮದಾಗಿಸಿಕೊಂಡಿದ್ದು, ಹೊಸ ರಾಷ್ಟ್ರ ದಾಖಲೆ ನಿರ್ಮಿಸಿದ್ದಾರೆ. ಬಿಲ್ಲುಗಾರಿಕೆಯಲ್ಲಿ ಜಮ್ಮು-ಕಾಶ್ಮೀರದ ಬಿಲ್ಲುಗಾತಿ ಶೀಥಲ್ ದೇವಿ ಸ್ವರ್ಣ ಪದಕ ಜಯಿಸಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>